ದಿನಾಂಕ 04-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ದಾವಾ ಆಸ್ತಿಯ ಕುರಿತು ಸರ್ವೆ ಮಾಡುವ ಪೂರ್ವದಲ್ಲಿ ಸದರಿ ಆಸ್ತಿಗಳಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ವಾದಿಯರಿಗೆ ಸಂಬಂಧಿಸಿದಂತೆ ಒಟ್ಟು 10 ಎಕರೆ 26 ಗುಂಟೆ ಇರುತ್ತದೆ. ಪ್ರತಿವಾದಿಗಳಿಗೆ ಸಂಬಂಧಿಸಿದ ಆಸ್ತಿಯ ಸರ್ವೆ ನಂ.757/3 ಇದ್ದು ಒಟ್ಟು 4 ಎಕರೆ ವಿಸ್ತೀರ್ಣ ಇರುತ್ತದೆ. ಸದರಿ ಸರ್ವೆ ಮಾಡುವ ಪೂರ್ವದಲ್ಲಿ ಮೂಲ ಪೀಟಿ ಶೀಟ್ ದಾಖಲೆಯನ್ನು ನೋಡಿರುತ್ತೇನೆ. ಸರ್ವೆ ನಂ.757 ರಲ್ಲಿ ಒಟ್ಟು 4 ಹಿಸ್ಸಾಗಳು ಇದ್ದು, ಒಟ್ಟು ವಿಸ್ತೀರ್ಣ 21 ಎಕರೆ 26 ಗುಂಟೆ ಇರುತ್ತದೆ. ಸರ್ವೆ ನಂ.757 ರ ಪೂರ್ವಕ್ಕೆ 753, ಪಶ್ಚಿಮಕ್ಕೆ 758, ದಕ್ಷಿಣಕ್ಕೆ 756 ಇದ್ದು ಉತ್ತರಕ್ಕೆ ಸರ್ವೆ ನಂ. 746 ಇರುತ್ತದೆ.

2. ಪೂರ್ವ ಭಾಗಕ್ಕೆ ಸರ್ವೆ ನಂ.751 ರಿಂದ 753 ರ ಆಸ್ತಿಗಳು ಇವೆ ಎಂದರೆ ಸರಿ. ನಾನು ಸರ್ವೆ ನಂ.757/4 ರ ಆಸ್ತಿಯ ಸರ್ವೆ ಮಾಡಿರುತ್ತೇನೆ. ಸದರಿ ಆಸ್ತಿಯ ಒಟ್ಟು ವಿಸ್ತೀರ್ಣ 10 ಎಕರೆ 26 ಗುಂಟೆ ಇರುತ್ತದೆ. ಆ ಸಮಯದಲ್ಲಿ ಸದರಿ ವಿಸ್ತೀರ್ಣವು ಹಿಸ್ಸಾ ಪಹಣಿಗಳು ಆಗಿದ್ದವು ಎಂದರೆ ಸರಿಯಲ್ಲ. ನಿಪಿ 4 ರಿಂದ 6 ರಂತೆ ನಾನು ಸರ್ವೆ ಮಾಡುವ ಸಮಯದಲ್ಲಿ ಹಿಸ್ಸಾ ಪಹಣಿಗಳಾಗಿದ್ದವು ಎಂದರೆ ಸರಿ. ಸರ್ವೆ ನಂ.757 ರ ಪೂರ್ತಿ ಆಸ್ತಿಯನ್ನು ಸರ್ವೆ ಮಾಡಿದರೆ ಮಾತ್ರ ಒತ್ತುವರಿಯ ಬಗ್ಗೆ ತಿಳಿಯುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಕೇವಲ ಸರ್ವೆ ನಂ.757/4 ರ ಆಸ್ತಿಯನ್ನು ಅಳತೆ ಮಾಡಿದರೆ ಮಾತ್ರ ಒತ್ತುವರಿ ತಿಳಿಯುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸರ್ವೆ ನಂ.757/3 ರಲ್ಲಿ 2 ಎಕರೆ ಆಸ್ತಿ ರೈಲ್ವೇ ಇಲಾಖೆಗೆ ಹೋಗಿರುವ ಕುರಿತು ನನ್ನ ಸರ್ವೆಯಲ್ಲಿ ತೋರಿಸಿರುವುದಿಲ್ಲ. ನಿಪಿ 20 ರಲ್ಲಿ ಸದರಿ ಆಸ್ತಿಯು ರೈಲ್ವೇ ಇಲಾಖೆಗೆ ಹೋಗಿರುವ ಕುರಿತು ತೋರಿಸಿರುವುದಿಲ್ಲ ಎಂದರೆ ಸರಿ. ಸರ್ವೆ ಮಾಡುವ ಕುರಿತು ನಮ್ಮ ಇಲಾಖೆಗೆ 1 ನೇ ವಾದಿ ಅರ್ಜಿ ನೀಡಿರುತ್ತಾರೆ. ಸರ್ವೆ ಮಾಡುವ ಪೂರ್ವದಲ್ಲಿ ಸರ್ವೆ ನಂ.757 ರ ಎಲ್ಲಾ ಮಾಲೀಕರಿಗೆ ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸನ್ನು ಲಿಯಾಕತ್ ಅಲಿ, ಹನುಮಂತಪ್ಪ ಅಯ್ಯಜ್ಜನವರ, ಅಶೋಕ್ ಹರಿಕೇರಿ, ರಾಜು ಮ್ಯಾಗೇರಿ, ರಾಜು ನರಸಗೊಂಡರ,

ಧ್ರಾಕ್ಷಾಯಣಿ ಗದಗಿಮಠ ಮತ್ತು ಮಂಜಪ್ಪ ಕನಕಗಿರಿ ಯವರಿಗೆ ದಿನಾಂಕ 16-12-2019

ರಂದು ನೊಂದಾಯಿತ ಅಂಚೆ ಮೂಲಕ ಕೊಟ್ಟಿರುತ್ತೇನೆ. ಸದರಿ ನೋಟೀಸಿನ ಕುರಿತು ನನ್ನ ಬಳಿ ದಾಖಲೆಗಳು ಇರುತ್ತವೆ. ಆ ರೀತಿ ಯಾವುದೇ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಸರ್ವೆ ನಂ.753/1 ಮತ್ತು 753/2 ರ ಮಾಲೀಕರಿಗೆ, 758/2 ಕ, 757/2, 757/1, 757/5 ರ ಮಾಲೀಕರಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 20 ರಲ್ಲಿ ಒಟ್ಟು ಸರ್ವೆ ನಂಬರ್ ನಲ್ಲಿರುವ ಖಾಯಂ ಕಲ್ಲುಗಳ ಬಗ್ಗೆ ನಮೂದಿಸಿರುವುದಿಲ್ಲ. ನಿಪಿ 20 ರ ನಕಾಶೆಯನ್ನು ಸರ್ವೆ ನಂ.757/4 ಕ್ಕೆ ಮಾತ್ರ ತಯಾರಿಸಿರುತ್ತೇನೆ. ನಿಪಿ 20 ರಲ್ಲಿ ಸರ್ವೆ ನಂ.757/3 ರ ವಿಸ್ತೀರ್ಣವನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಾನು ಸರ್ವೆ ಮಾಡುವ ಸಮಯದಲ್ಲಿ ಸರ್ವೆ ನಂ.757/4 ರಲ್ಲಿ ಒಟ್ಟು 3 ಹಿಸ್ಸಾಗಳು ಆಗಿದ್ದವು ಎಂದರೆ ಸರಿ. ಸರ್ವೆ ನಂ.757/3 ಮತ್ತು 757/4 ರ ಮಧ್ಯೆ ಒಂದು ಒಡ್ಡು ಇದೆ ಎಂದೆ ಸರಿ. ಸದರಿ ಜಮೀನುಗಳು ಪ್ರತ್ಯೇಕ ಉಳುಮೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ನನ್ನ ವರದಿಯಲ್ಲಿ ತಿಳಿಸಿರುವಂತೆ ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.